**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

**ಸಾಕ್ಷಿಗೆ ದಿನಾಂಕಃ 15-11-2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

C.C.No. 1858/2011

CW-17 PW-10

ಸಾಕ್ಷಿದಾರರ ಹೆಸರು - ಬಸವರಾಜ ಶಿವರುದ್ರಪ್ಪಾ ಬಡಿಗೇರ

ವಯಸ್ಸು - 52 ವರ್ಷ

ಉದ್ಯೋಗ - ಎ ಎಸ್ ಐ

ಸಾಕೀನ - ಅಂಕಲಗಿ ಪೋಲಿಸ ಠಾಣೆ

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1) ನಾನು 2011 ರಿಂದ 2015 ರ ವರೆಗೆ ಗೋಕಾಕ ಶಹರ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ಈ ಪ್ರಕರಣಕ್ಕೆ ಸಂಬಧಿಸಿದಂತೆ ಚಾಸಾ 24 ರವರು ಗೋಕಾಕ ಶಹರದಲ್ಲಿ ಕಳುವಾದ ವಸ್ತುಗಳನ್ನು ಮತ್ತು ಕಳುವು ಮಾಡಿದ ವ್ಯಕ್ತಿಗಳನ್ನು ಪತ್ತೆ ಹಚ್ಚುವಂತೆ ಆದೇಶ ಮಾಡಿದ್ದು, ದಿಃ 03-08-2011 ರಂದು ಗೋಕಾಕ ಶಹರದ ಅರಭಾಂವಿ ಶಿಂಧಿಕುರುಬೇಟ, ಘಟಪ್ರಭಾ ಮತ್ತು ಕೊಣ್ಣೂರ ಸೇರಿದಂತೆ ಹಲವು ಸ್ಥಳಗಳಲ್ಲಿ ಹುಡುಕಾಟ ಮಾಡಿದ್ದು, ಅಲ್ಲಿಯ ಸ್ಥಳೀಯರನ್ನು ವಿಚಾರಿಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ದೊರೆತರೆ ನಮಗೆ ತಿಳಿಸಬೇಕೆಂದು ಹೇಳಿದ್ದು, ನಂತರ ಯಾವುದೇ ಮಾಹಿತಿ ಸಿಗದ ಕಾರಣ ಚಾಸಾ 24 ರವರಿಗೆ ವರದಿ ನೀಡಿರುತ್ತೇನೆ. ನಂತರ ದಿಃ 02-09-

2011 ಮತ್ತು 13-09-2011 ರಂದು ಗೋಕಾಕ ಶಹರದಲ್ಲಿ ಬಸವನಗರ, ವಿದ್ಯಾನಗರ, ಅಂಬಿಗೇರ ಗಲ್ಲಿ ಮತ್ತು ಮರಾಠಾಗಲ್ಲಿ ಹಾಗೂ ಲಕ್ಷ್ಮೀ ನಗರದಲ್ಲಿ ತಪಾಸಣೆ ಮಾಡಿ, ಕಳುವಾದ ಮಾಲುಗಳು ಹಾಗೂ ಆರೋಪಿಗಳು ಪತ್ತೆಯಾಗದೆ ಇದ್ದುದರಿಂದ, ಚಾಸಾ 24 ರವರಿಗೆವರದಿ ಸಲ್ಲಿಸಿರುತ್ತೇನೆ. ದಿಃ 27-09-2011 ರಂದು ಚಿಕ್ಕೋಡಿಯಲ್ಲಿ ತಪಾಸಿಸಿ, ಕಳುವಾದ ಮಾಲುಗಳು ಹಾಗೂ ಆರೋಪಿಗಳು ಪತ್ತೆಯಾಗದೆ ಇದ್ದುದರಿಂದ, ಚಾಸಾ 24 ರವರಿಗೆವರದಿ ಸಲ್ಲಿಸಿರುತ್ತೇನೆ.

3) ಸಾಕ್ಷಿ ತಮ್ಮ ವರದಿಗಳ ಮೇಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-15 ರಿಂದ ನಿಪಿ-18 ಎಂದು ಸಾಕ್ಷಿಯ ಸಹಿಗಳನ್ನು ನಿಪಿ-15(ಎ) ರಿಂದ ನಿಪಿ-18 (ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ 4 ರ ಪರ ವಕೀಲರಿಂದಃ**

1) ನನ್ನನ್ನು ದಿನಾಂಕಃ 03-08-2011 ರಂದು ಕರ್ತವ್ಯಕ್ಕೆ ನೇಮಿಸಿದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಇದ್ದು, ಸದರಿ ದಾಖಲೆಯನ್ನು ತನಿಖಾಧಿಕಾರಿಗಳು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಾರೆ. ನಿಪಿ-15 ರಲ್ಲಿ ಹೇಳಿರುವ ಮೂರು ಜನ ಆರೋಪಿಗಳನ್ನು ನಾನು ನೋಡಿರುವುದಿಲ್ಲ. ನಿಪಿ-16 ರಲ್ಲಿ ಹೇಳಿರುವ ನಾಲ್ಕು ಜನ ಆರೋಪಿಗಳನ್ನು ನಾನು ನೋಡಿರುವುದಿಲ್ಲ. ನಿಪಿ-15 ಮತ್ತು ನಿಪಿ-16 ರಲ್ಲಿರುವ ಆರೋಪಿಗಳ ಹೆಸರುಗಳು ಪ್ರಥಮ ವರ್ತಮಾನ ವರದಿಯಲ್ಲಿ ನಮೂದ ಇದ್ದ ಬಗ್ಗೆ ನಾನು ಪರಿಶೀಲಿಸಿದ್ದೆ. ಅದೇ ರೀತಿ ನಿಪಿ-17 ಮತ್ತು ನಿಪಿ-18 ರಲ್ಲಿರುವ ಆರೋಪಿಗಳನ್ನು ನೋಡಿರುವುದಿಲ್ಲ ಮತ್ತು ಅವರ ಹೆಸರುಗಳು ಪ್ರಥಮ ವರ್ತಮಾನ

ವರದಿಯಲ್ಲಿ ನಮೂದ ಆದ ಬಗ್ಗೆ ಪರಿಶೀಲಿಸಿದ್ದೆ. ನಿಪಿ–15 ರಿಂದ 18 ಗಳಲ್ಲಿ ನಾನು ಯಾವ ಸಮಯಕ್ಕೆ ಸದರಿ ಸ್ಥಳಗಳಲ್ಲಿ ತಪಾಸಣೆಗೆ ಹೋಗಿದ್ದೆ ಎಂದು ನಮೂದಿಸಿರುವುದಿಲ್ಲ. ನಾನು ಯಾವುದೇ ಸ್ಥಳಗಳಿಗೆ ತಪಾಸಣೆಗೆ ಹೋಗಿರುವುದಿಲ್ಲ ಮತ್ತು ತಪಾಸಣೆ ಮಾಡಿರುವುದಿಲ್ಲ,ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಪ್ರಕರಣಕ್ಕೆ ಅನುಕೂಲವಾಗುವಂತೆ ವರದಿಗಳನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ 1 ರ 2 ಪರ ವಕೀಲರಿಂದಃ**

ಆರೋಪಿ 4 ರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.& ನ್ಯಾದಂ., ಗೋಕಾಕ.